# MANGALORE MARKET REPORTS

MMR MEDIA Since 1975



REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244



Vol.50 ENGLISH DAILY Subscription Yearly - Rs. - TUESDAY 11-4-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಅಕ್ಟೋಬರ್ 2022 ಮಾರ್ಚ್ 2023 ಅವಧಿಯ ಸೋಯಾಮೀಲ್ ರಫ್ತು 110 ಶೇಕಡಾ ವೃದ್ಧಿ

ಭಾರತದಿಂದ ಸೋಯಾಮೀಲ್ ಮತ್ತು ಮೌಲ್ಯವರ್ಧಿಕ ಉತ್ಪಾದನೆಗಳ ರಫ್ತು 2022 ಅಕ್ಟೋಬರ್ ನಿಂದ 2023 ಮಾರ್ಚ್ ಅಂತ್ಯದ ಅವಧಿಯಲ್ಲಿ 110 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ವಿಯೆಟ್ನಾಂ, ನೇಪಾಳ, ಬಾಂಗ್ಲಾ ದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ರಫ್ತಾಗಿದೆಯೆನ್ನಲಾಗಿದೆ. 2022–23 ಅವಧಿಯಲ್ಲಿ 9.99 ಲಕ್ಷ ಟನ್ ಸೋಯಾಮೀಲ್ ರಫ್ತಾಗಿದ್ದು, ಹಿಂದಿನ ವರ್ಷದ ಇದೇ ಅವಧಿಯಲ್ಲಿ 4.74 ಲಕ್ಷ ಟನ್ ರಫ್ತಾಗಿತ್ತೆನ್ನಲಾಗಿದೆ. ಉತ್ಪಾದನೆಯೂ ಹೆಚ್ಚಳವಾಗಿತ್ತು. ಇತರ ಆಮದುದಾರರು ಅಮೇರಿಕಾ, ಜಪಾನ್, ಶ್ರೀಲಂಕಾ, ಥೈಲಾಂಡ್‌ಗಳಾಗಿವೆ. ಈ ವರ್ಷ ಟನ್ ಸೋಯಾಮೀಲ್ ರಫ್ತು ಮಾಡಲುದ್ದೇಶಿಸಿದೆಯೆನ್ನಲಾಗಿದೆ.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಹೆಚ್ಚಳ

ಮಲೇಶೀಯಾದ ಪಾಮೆಣ್ಣೆ ದಾಸ್ತಾನು ಇಳಿಕೆ ಹಾಗೂ ಉತ್ಪಾದನೆ ಇಳಿಕೆಯ ವರದಿಗಳಿಂದ ಟನ್‌ಗೆ 41 ರಿಂಗಿಟ್ಸ್ (1.07 ಶೇಕಡಾ ಹೆಚ್ಚಳ) ವಾಗಿ 3878 ರಿಂಗಿಟ್ಸ್ ($ 878.37) ಆಗಿದೆ. ಇಂಡೋನೇಶೀಯಾದ ಪಾಮೆಣ್ಣೆ ರೆಫರೆನ್ಸ್ ದರ ಎಪ್ರಿಲ್ 16–30 ಅವಧಿಗೆ ಈಗಿರುವ ಟನ್‌ಗೆ $ 898.29 ರಿಂದ $ 932.69 ಕ್ಕೆ ಹೆಚ್ಚಳ ಮಾಡಲು ಚಿಂತಿಸಲಾಗುತ್ತಿದೆಯೆನ್ನಲಾಗುತ್ತಿದೆ.